## ರೋದನ

ಕೆಲವರದು
‘ಅರಣ್ಯರೋದನ’;
ಬಹುಮಂದಿಯದು
ಗೃಹರೋದನ!

## ಬು(ಯು)ದ್ಧ

ಈಗ ಜಗತ್ತಿನ
ಎರಡು ಶಕ್ತಿಗಳು:
ಬುದ್ಧ ಮತ್ತು ಯುದ್ಧ;
ಬುದ್ಧನಿಂದ ಸರ್ವೋದಯ,
ಯುದ್ಧದಿಂದ ಸರ್ವೋದಯ!

## ಕೈ(ವಾಡ)

ಈಗ
‘ಅಂಗೈಯಲ್ಲಿ ಆಕಾಶ’
ಮಾತ್ರವಲ್ಲ;
ಬೆರಳಿನಲ್ಲಿ
ಭೂಮಂಡಲ!




## ಉತ್ತರ

ಹೆಣ್ಣು ಸಾಮಾನ್ಯಳೆ?
ಲೋಕೋತ್ತರ(ರೆ):
ಎಂತಲೇ ಕಾವ್ಯ,
ಕಲೆ ಇತ್ಯಾದಿಗಳೆಲ್ಲ
‘ಉತ್ತರ’ಮುಖಿ!

## ಮುಳುಗು

ಸಂಸಾರ
‘ಮೃತ’
ಸಮುದ್ರವಲ್ಲ
ಖಂಡಿತ ಮುಳುಗಿಸುತ್ತದೆ!

■ ಸಿ.ಪಿ.ಕೆ.

ಎಂದು ನನ್ನ ಬಾಯಿಕಟ್ಟುತ್ತಾಳೆ. ಭಿಕ್ಷುಕರನ್ನು ನಮ್ಮ ಔದಾರ್ಯ ಸಾರಲೆಂದೇ ಸಾಕಿಕೊಂಡಿದ್ದೇವೆಯೇ? ಪುಣ್ಯ ಸಂಪಾದನೆಗೆ ದಾರಿದ್ರ್ಯವನ್ನು ಪೋಷಿಸುವ ದಾನದ ಕಲ್ಪನೆ ಮನುಷ್ಯರ ಘನತೆಯನ್ನು ನಾಶಪಡಿಸುವುದಿಲ್ಲವೇ?

ಈ ವಿಷಯದಲ್ಲಿ ನಮಗೆ ಪಲ್ಲೆ ಹಾಕುವ ಗೌರಜ್ಜಿ ಘನತೆವೆತ್ತವಳು. ಗಂಡ ಸತ್ತು ಒಂಟಿಯಾದ ಈಕೆ ದಿಟ್ಟವಾಗಿ ಬೀದಿವ್ಯಾಪಾರ ಮಾಡಿ ಜೀವನ ತೇಗೆಯುತ್ತಾಳೆ. ಪರಿಚಿತವಿರುವ ಮನೆಯ ಗೇಟನ್ನು ಮೆಲ್ಲ ತೆರೆದು, ಜಗುಲಿಯ ಮೇಲೆ ತರಕಾರಿ ಬುಟ್ಟಿ ಇಳಿಸಿ ‘ಅಕ್ಕಾ’ ಎಂದು ನೀರುಕೇಳುವವಳು. ನೀರ ಜತೆ ಟೀ ಸಿಗುವುದು ಎಂದವಳಿಗೆ ಗೊತ್ತು. ಬಾನು ಮನೆಯಲ್ಲಿಲ್ಲದಿದ್ದರೆ ‘ಅಕ್ಕೆಲ್ಲಿಗೊ ಹೋಗ್ಯಾಳ’ ಎಂದು ವಿಚಾರಿಸುವಳು. ‘ಪುಣ್ಯ ಮಾಡಿದ್ದೆ ಕಣಯ್ಯ ಆಯಮ್ಮ ಸಿಗಕೆ’ ಎಂದು ಮೆಚ್ಚುಗೆ ಸಲ್ಲಿಸುವಳು. ಅವಳ ಪಾಲಿಗೆ ನಾನು ಆರಾಮಪರಸ್ತಿ ಮನುಷ್ಯ! ಹಸಿಯಾಗಿ ತಿನ್ನಲು ಮೆಂತೆಯನ್ನೋ ಈರುಳ್ಳಿದಂಟನ್ನೋ ಮೂಲಂಗಿಯನ್ನೋ ಕೊಂಡರೆ, ತಾನೇ ಸೋಸಿಕೊಡುವಳು. ಮೂಲಂಗಿ ಸೊಪ್ಪನ್ನು ಬಿಸಾಡದೆ ಹೇಗೆ ಎಣ್ಣೆಯಲ್ಲಿ ತಾಳಿಸಬೇಕೆಂದು ವಿವರಿಸುವಳು. ಬಾನು ಇಲ್ಲದಿರುವಾಗ, ಅದರಲ್ಲೂ ಭಾನುವಾರ ಅವಳ ಕದತಟ್ಟುವಿಕೆ ನನ್ನ ನಿದ್ದೆಯನ್ನು ಭಂಗಿಸುವುದುಂಟು. ದಢಾರನೆ ಬಾಗಿಲು ತೆರೆದು, ‘ಎಂಟುದಿನ ಪಲ್ಲೆಬ್ಯಾಡ’ ಎಂದರೆ, ‘ಅಮ್ಮ ಇಲ್ಲಂತ ಕಾಣ್ತದ. ಸಿಟ್ಟಾಗಬ್ಯಾಡಯ್ಯ. ಪಾಪ! ಬದುಕು ಮಾಡಿ ಸಾಕಾಗಿ ತವರಮನಿಗೆ ಹೋಗ್ಯಾಳ, ಬರ್ತ್ಯಾಳ’ ಎಂದು ವಕಾಲತ್ತು ಹೇಳಿ ಹೋಗುವಳು.

ಬೀದಿಕರೆಗಳು ನಮ್ಮ ಜತೆ ಕೇವಲ ಸರಕಿನ ಸಂಬಂಧ ಇರಿಸಿಕೊಂಡಿಲ್ಲ; ಬಾಳ ಸುಖದುಃಖದ ಭಾಗವೂ ಆಗಿವೆ. ಯಾರಾದರೂ ಒಬ್ಬ ಕಾಯಿಪಲ್ಲೆಯವನು ಇದ್ದಕ್ಕಿದ್ದಂತೆ ಬರುವುದನ್ನು ನಿಲ್ಲಿಸಿದರೆ, ಬೀದಿಯ ಜನ ಅವನಿಗೇನಾದರೂ ಕಾಯಿಲೆಯಾಯಿತೇ ಎಂದು ಕಳವಳಿಸುವರು. ಬಿಡುವಾಗಿದ್ದಾಗ ಸಿಕ್ಕರೆ, ಮನೆಕಷ್ಟ ವಿಚಾರಿಸುವರು. ಒಮ್ಮೆ ಒಬ್ಬ ಗರ್ಭಿಣಿ ಪಪ್ಪಾಯಿ ತಂದಿದ್ದಳು. ಬಾನು ಅವಳನ್ನು ಕೂರಿಸಿ ತಿಂಡಿಕೊಟ್ಟು “ದಿಮ್ಮನಸಿ ಬಿಸಿಲಲ್ಲಿ ತಿರುಗಾಡ್ತೀಯಲ್ಲಮ್ಮ” ಎಂದರೆ, “ನನ್ನ ಗಂಡನೂ ತಿರಗಬ್ಯಾಡ ಅಂತಾನಕ್ಕ. ಗೌಂಡಿ ಕೆಲಸಕ್ಕೆ ಹೋತಾನ. ಒಬ್ಬನೇ ಎಷ್ಟಂತ ಮಾಡ್ತಾನ. ನಾನು ಮಂಡ್ಯಾಗ ಹಾಕಿಸಿಕೊಂಡು ಬರ್ತೀನಿ. ನೂರು ರೂಪಾಯಿ ಉಳಿತಾವ. ಮಗನಿಗೆ ಕಾನ್ವೆಂಟಿಗೆ ಹಾಕೀನಿ” ಎಂದಳು. ಈ ಅನುಭೂತಿ ಒಮ್ಮೊಮ್ಮೆ ದುಬಾರಿಯಾಗುತ್ತದೆ. ಮೂಲಂಗಿ ತರುವ ಮುದುಕಿಯ ಮಂಕನ್ನು ಕಂಡು ನಾನು ‘ಏನಾತವ್ವ’ ಎಂದೆ. ಪಟ್ಟನೆ ಕಣ್ಣೀರು ತೆಗೆದು “ಮಗ ಗಾಡಿಂದ ಬಿದ್ದು ಸೊಂಟ ಮುರಕೊಂಡಾನಯ್ಯ. ಅಂಗಡಿ ಕೆಲಸಕ್ಕೆ ಹೋತಿದ್ದ. ಮನೀ ಜಂತಿ ಮುರಕಂಡಾಗ್ಯದ’ ಎಂದಳು. ಹೌದೇನವ್ವ ಎಂದು ಆಸ್ಪತ್ರೆಗೆ ಖರ್ಚಿಗೆ ಎಂದು ಕಾಸುಕೊಟ್ಟೆವು. ಆತ ಉಳಿಯಲಿಲ್ಲ. ಸೆಪ್ಟಿಕ್ ಆಗಿ ತೀರಿಕೊಂಡ. ಆಕೆ ದಿನವೂ ಮನೆಯ ಕಷ್ಟ ಹೇಳುತ್ತ, ಕಣ್ಣೀರು ಹಾಕತೊಡಗಿದಾಗ, ಈಕೆಯ ಕಾಯಿಪಲ್ಲೆ ಬೇಡವಾಗತೊಡಗಿತು. ಪ್ರತಿ ಬೀದಿಯೂ ನೂರಾರು ಕೂಗುಗಳನ್ನು ಕೇಳಿಸಿಕೊಳ್ಳುತ್ತದೆ. ಕೆಲವು ನಮ್ಮ ಕಿವಿ ಪರದೆಗೆ ತಾಗಿದರೂ ಸಂಬಂಧವಿಲ್ಲದಂತೆ ಪರಕೀಯವಾಗಿ ಉಳಿಯುತ್ತವೆ. ಉದಾಹರಣೆಗೆ, ಬೀಟ್ ಪೊಲೀಸರ ವಿಜಲಿನ ದೃಶ್ಯರೂಪವು ಕಾಣುವುದೇ ಇಲ್ಲ; ರಂಗೋಲಿ, ಬಳೆ, ಕೊಡೆ ರಿಪೇರಿ, ಸೀಮೆಯೆಣ್ಣೆ, ಸಾಣೆ, ಹಾಲಕ್ಕಿ ಕೂಗುಗಳು ದೃಶ್ಯಸಮೇತ ಎಂದೋ ಮರೆಯಾಗಿವೆ. ಬೆಳ್ಳಿಮೂಡುವ ಹೊತ್ತಲ್ಲಿ ಬರುತ್ತಿದ್ದ ಹಾಲಕ್ಕಿಯವರ ಶಕುನಕ್ಕೆ ಹೆದರಿಕೊಂಡು ನಾವು ಹೊರಗೇ ಬರುತ್ತಿರಲಿಲ್ಲ. ಮಸಣದಲ್ಲಿ ಅವರು ಕದ್ದುಕೂತು ಹಕ್ಕಿಗಳು ಮಾತಾಡುವುದನ್ನು ಕೇಳಿಕೊಂಡು ತಂದು ನಮಗೆ ಹೇಳುತ್ತಾರೆಂದೂ, ಬೀದಿಯಲ್ಲಿ ಯಾರಾದರೂ ಸಾಯುತ್ತಾರೆಂದೂ ಅಮ್ಮ ಆತಂಕದಲ್ಲಿ ವಿವರಿಸುತ್ತಿದ್ದಳು. ಕೂದಲ ಬದಲಿಗೆ ಸೂಜಿ, ಪಿನ್ನು, ಹೇರ್‌ಪಿನ್ನು, ದಬ್ಬಳ, ಬಾಚಣಿಗೆ ವಿನಿಮಯಿಸುತ್ತಿದ್ದ ವ್ಯಾಪಾರಿಗಳು ಎಲ್ಲಿ ಹೋದರೊ? ಅವರು ತರುತ್ತಿದ್ದ ಚೌರಿಕೂದಲು, ವ್ಯಾಸಭಾರತ ಆಧರಿಸಿ ಪಂಪ ‘ಕನ್ನಡ ಭಾರತ’ ರಚಿಸಿದಂತೆ ಭಾಸವಾಗುತ್ತದೆ. ಸಹಸ್ರಾರು ಮಂದಿಯ ಬಿಡಿಕೂದಲು ಸೇರಿ ನಿರ್ಮಾಣವಾಗುವ ಆ ಚವುರಿಜಡೆ ನಿಜಕ್ಕೂ ಜಾತ್ಯತೀತ. ಸಾಣೆ ಹಿಡಿಯುವರು ಒಮ್ಮೆ ಸಾರು ಹಾಕಿ ಬೀದಿಯ ತುದಿಯಲ್ಲಿ ಚಕ್ರ ಹೂಡಿದರೆಂದರೆ ಸಮಸ್ತ ಗೃಹಿಣಿಯವರು ತಮ್ಮ ಚಾಕುಚೂರಿ ತಂದು ಸಾಣೆ ಹಿಡಿಸಿಕೊಂಡು ಹೋಗುತ್ತಿದ್ದರು. ಬೆಂಗಳೂರಿನ ಸಾಣೆಗರು ಮೊಪೆಡ್ಡಿನ ಮಸೆಗಲ್ಲು ಚಕ್ರವಿಟ್ಟುಕೊಂಡು ಬರುವರು. ಕೂಗುವುದಿಲ್ಲ. (ಬೆಂಗಳೂರಲ್ಲಿ ಬೀದಿಯಲ್ಲಿ ನಿಂತು ಕೂಗಿದರೆ ಯಾರಿಗೆ ತಾನೇ ಕೇಳುತ್ತದೆ — ಆಟೊ, ಬೈಕುಗಳ ಸದ್ದುಗಳಲ್ಲಿ?) ಗುರ್ತಿರುವ ಮನೆಗಳಿಗೆ ಹೋಗಿ ಮೊಂಡಾಗಿರುವ ಆಯುಧ ಹರಿತಗೊಳಿಸುತ್ತಾನೆ.

ಮಾರುಕಟ್ಟೆಯಲ್ಲೂ ಸಂತೆಯಲ್ಲೂ ಕೂಗುಗಳಿವೆ. ಅವು ಸ್ಥಾವರ, ನಾವು ಜಂಗಮರು. ಬೀದಿಕರೆಗಳ ವಿಷಯದಲ್ಲಿ ನಾವು ಸ್ಥಾವರ, ಅವು ಜಂಗಮ. ಎರಡು ಗಂಟೆ ಸತತ ಪಾಠಮಾಡಿದರೆ ಸುಧಾರಿಸಿಕೊಳ್ಳುವ ನಾನು ಸೋಜಿಗಗೊಳ್ಳುತ್ತೇನೆ: ಈ ಕಲಾವಿದರು ವ್ಯಾಪಾರಿಗಳು ಕಲಾವಿದರು ಎಷ್ಟೊಂದು ಕೂಗುತ್ತಾರೆ, ನಡೆಯುತ್ತಾರೆ, ಭಾರ ಹೊರುತ್ತಾರೆ? ಬೆಳಗಿನಿಂದ ಸಂಜೆತನಕ ಎಷ್ಟೊಂದು ಕರೆಗಳನ್ನು ಬೀದಿ ಕೇಳಿಸಿಕೊಳ್ಳುತ್ತದೆ? ನಿಜ, ಕೆಲವೊಮ್ಮೆ ಇವು ಕಿರಿಕಿರಿ ಮಾಡುತ್ತವೆ. ಆದರೆ ಕೂಗಿಕರೆಯದೆ ಅವರ ಬದುಕಿನ ಬಂಡಿ ಸಾಗದು. ಹಕ್ಕಿಗಳಂತಿರುವ ಅವರ ಸ್ವರಮೇಳ ಇಲ್ಲದಿದ್ದರೆ ಬೀದಿ ಬದುಕಿದ್ದೂ ಸತ್ತಂತಾಗುವುದು. ■